ಗೌರಿಬಿದನೂರು ತಾಲ್ಲೂಕಿನಲ್ಲಿನ ಸದರಿ ರಾಜ್ಯ ಹೆದ್ದಾರಿ ನಿರ್ವಹಣೆಯಡಿಯಲ್ಲಿ ಆಯ್ದ - ಭಾಗಗಳಲ್ಲಿ ಒಟ್ಟು 10 57 ಕಿ ಮೀ ಮರುಡಾಂಬರೀಕರಣ ಹಾಗೂ 2 88 ಕಿ ಮೀ ರಸ್ತೆಯನ್ನು ಬಲಪಡಿಸಿ, ಡಾಂಬರೀಕರಣ ಮಾಡಲಾಗಿರುತ್ತದೆ

ಇದಲ್ಲದೆ ಬೆಂಗಳೂರು ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸುವ ಯೋಜನೆಯಡಿಯಲ್ಲಿ ಸದರಿ ರಸ್ತೆಯ ಕಿ ಮೀ 13 60 ರಿಂದ 56 30 ರವರೆಗೆ ಅಭಿವೃದ್ಧಿಗೊಳಿಸಲು 42 ಕೋಟಿ ರೂ ಗಳಿಗೆ ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆಯೂ ಪ್ರಗತಿಯಲ್ಲಿದೆ

ಗೌರಿಬಿದನೂರು ತಾಲ್ಲೂಕಿನಲ್ಲಿನ ಸದರಿ ರಾಜ್ಯ ಹೆದ್ದಾರಿಯ ಕೆಲವು ಭಾಗಗಳು ದುಸ್ಥಿತಿಯಲ್ಲಿದ್ದು, ಅನುದಾನದ ಲಭ್ಯತೆಗನುಸಾರವಾಗಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ

964 (907) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಜಮಖಂಡಿ, ರಬಕವಿ, ಬನಹಟ್ಟಿ ಮತ್ತು ತೇರದಾಳ ನಗರಗಳಲ್ಲಿ ಸಾರ್ವಜನಿಕ ಶೌಚಾಲಯಗಳ ತೊಂದರೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮಗಳನ್ನು ಜರುಗಿಸಲಾಗಿದೆ,

ಇ) ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿಸಲು ಇರುವ ನಿಯಮಾವಳಿಗಳೇನು,

ಈ) ನಿಯಮಾನುಸಾರ ಸೆಪ್ಟಿಕ್ ಶೌಚಾಲಯಗಳನ್ನು ಉಪಯೋಗಿಸಲು ಬಹಳಷ್ಟು ಜನ ಹಿಂಜರಿಯುತ್ತಿರುವುದರಿಂದ ಕಾಂಪೌಂಡ್ ಶೌಚಾಲಯಗಳನ್ನು ಕಟ್ಟಿಸಲು ಇರುವ ತೊಂದರೆಗಳೇನು,

ಉ) ವ್ಲವರ್ ಬೋರ್ಡ್‌ನಿಂದ ಕಟ್ಟಿಸಿದ ಶೌಚಾಲಯಗಳನ್ನು ಪ್ರಾರಂಭಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ,

ಊ) ಹಾಗಿದ್ದಲ್ಲಿ, ಅವುಗಳನ್ನು ಪ್ರಾರಂಭಿಸಲು ಇರುವ ತೊಂದರೆಗಳೇನು,

ಋ) ಈ ಮೂರು ನಗರಗಳಲ್ಲಿ ಫ್ಲವರ್ ಬೋರ್ಡ್‌ನಿಂದ ಕಟ್ಟಿಸಿರುವ ಶೌಚಾಲಯಗಳೆಷ್ಟು ಹಾಗೂ ಅವುಗಳಲ್ಲಿ ಎಷ್ಟನ್ನು ಪ್ರಾರಂಭಿಸಲಾಗಿದೆ ಮತ್ತು ಉಳಿದವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಬಂದಿದೆ

ಆ) ರಬಕವಿ–ಬನಹಟ್ಟಿ ನಗರಗಳಲ್ಲಿ ನಗರಸಭೆಯ ಫಂಡಿನಿಂದ ಹಾಗೂ ಸರ್ಕಾರದ ವಿವಿಧ ಯೋಜನೆಗಳಲ್ಲಿ ಮಂಜೂರಾದ ಹಣದಿಂದ ಹಂತಹಂತವಾಗಿ ಸುಸಜ್ಜಿತ ಶೌಚಾಲಯ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ

ಜಮಖಂಡಿ ಮತ್ತು ತೇರದಾಳ ನಗರಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಅವಶ್ಯಕತೆಗೆ ಅನುಸಾರವಾಗಿ ನಿರ್ಮಿಸಲಾಗುತ್ತಿದೆ

ಇ) ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿಸುವ ಬಗ್ಗೆ ಯಾವುದೇ ನಿರ್ದಿಷ್ಟ ನಿಯಮಗಳು ಇರುವುದಿಲ್ಲ ಆದಾಗ್ಯೂ ನಿರಂತರ ನೀರು ಸರಬರಾಜು, ಸ್ವಚ್ಛತೆ ಇತ್ಯಾದಿಗಳನ್ನು ಆಧರಿಸಿ ಸುಸಜ್ಜಿತ ವ್ಯವಸ್ಥೆಗಳುಳ್ಳ ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕಾಗಿರುತ್ತದೆ

ಈ) Employment of Manual Scavengers & Construction of Dry Latrines (Prohibition) Act 1993 ಪ್ರಕಾರ ಕಾಂಪೌಂಡ್ ಶೌಚಾಲಯಗಳನ್ನು ಕಟ್ಟಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ

ಉ) ಫ್ಲವರ್ ಬೋರ್ಡ್ ಇರುವ ಬಗ್ಗೆ ಸದ್ಯಕ್ಕೆ ಮಾಹಿತಿ ಇರುವುದಿಲ್ಲ

ಊ) ಉದ್ಭವಿಸುವುದಿಲ್ಲ

ಋ) ಉದ್ಭವಿಸುವುದಿಲ್ಲ

965 (1209) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿರುವ ನೇಕಾರರ ಒಟ್ಟು ಸಾಲವೆಷ್ಟು, (ಸಹಕಾರ ಮತ್ತು ರಾಷ್ಟ್ರೀಕೃತ ಬ್ಯಾಂಕಿನ ಪ್ರತ್ಯೇಕ ವಿವರ ನೀಡುವುದು)

ಆ) ರಾಜ್ಯದಲ್ಲಿ ಕನಿಷ್ಟ ಸೌಲಭ್ಯಗಳಿಂದ ಬದುಕನ್ನು ಸಾಗಿಸುವ ಕಡು ಬಡ ನೇಕಾರರ ಸಾಲವನ್ನು ಮನ್ನಾ ಮಾಡುವ ಯೋಜನೆ ಇದೆಯೇ,

ಇ) ಹಾಗಿಲ್ಲದಿದ್ದಲ್ಲಿ ಕಾರಣವೇನು?